## ಮೂರನೇ ವಿಕೆಟ್ ಕಳಚಿಕೊಂಡಿದೆ

ವರ್ಷಗಳ ಕಾಲ ಹೊಯ್ದಾಡಿ ಎಳೆದ 'ಪುಟ್ಟಗೌರಿ ಮದುವೆ'ಯ ಎರಡನೇ ಭಾಗದಂತಿರುವ 'ಮಂಗಳಗೌರಿ ಮದುವೆ'ಯ ನಾಯಕ ಪೊಲೀಸ್ ಇನ್‌ಸ್ಪೆಕ್ಟರ್ ರಾಜೀವ್ ಪಾತ್ರಧಾರಿ ಗಗನ್ ಚಿನ್ನಪ್ಪ ಧಾರಾವಾಹಿಯಿಂದ ಹೊರ ಬಂದಿದ್ದಾರಂತೆ. ಬಳ್ಳಿ (ಕೃತಿ), ಸ್ನೇಹ (ಯಶಸ್ವಿನಿ) ಕಳಚಿಕೊಂಡ ನಂತರ ಈಗ ಗಗನ್ ಮೂರನೆಯವರು.

ಪಾತ್ರದಲ್ಲಿನ ಏಕತಾನತೆ ಮತ್ತು ಒಂದೇ ಬಗೆಯ ಪಾತ್ರದಲ್ಲಿ ಬಹುಕಾಲ ತೊಡಗಿಕೊಳ್ಳುವುದು ಕಷ್ಟ ಎನ್ನುವ ಕಾರಣಕ್ಕೆ ದೂರವಾಗಿರಬಹುದು. ಪಾತ್ರಧಾರಿಗಳೇ ಇಷ್ಟು ಸುಸ್ತಾದರೆ, ವೀಕ್ಷಕರಪಾಡು ಏನಾಗಿರಬಹುದು? ಗೊತ್ತುಗುರಿ ಇಲ್ಲದೆ ಧಾರಾವಾಹಿಯನ್ನು ಎಳೆದರೆ ಉಳಿದವರೂ ದೂರವಾಗಬಹುದು.

—ರಮಾನಂದ ಶರ್ಮಾ, ಬೆಂಗಳೂರು

## ಹೊಸ ಟ್ರೆಂಡ್

ಇತ್ತೀಚಿನ ದಿನಗಳಲ್ಲಿ ಟೀವಿಯಲ್ಲಿ ಬರುವ ರಿಯಾಲಿಟಿ ಶೋಗಳಲ್ಲಿ ಹೊಸ 'ಟ್ರೆಂಡ್' ಶುರುವಾಗಿದೆ. ಹಾಡುವ ರಿಯಾಲಿಟಿ ಶೋಗಳಲ್ಲಿ ಬರುವ ಹುಡುಗ–ಹುಡುಗಿಯರಿಗೆ ಸಂಬಂಧ ಕಟ್ಟಿ ಅವರಿಬ್ಬರನ್ನು ಗೇಲಿ ಮಾಡುವುದು. ಅವರು 'ಡ್ಯುಯಟ್' ಹಾಡಿದರಂತೂ ಮುಗಿದೇಹೋಯ್ತು.

ಪ್ರೇಮಿಗಳೇನೋ ಅವರಿಬ್ಬರು ಎನ್ನುವ ಹಾಗೆ ಕಾರ್ಯಕ್ರಮ ನಡೆಸಿಕೊಡುವ ನಿರೂಪಕ/ನಿರೂಪಕಿ ಹಾಗೂ ತೀರ್ಪುಗಾರರು ಕೂಡ ಮಾತನಾಡಲು ಶುರು ಮಾಡುತ್ತಾರೆ. ಒಂದು ಹುಡುಗ ಹುಡುಗಿ ಮಾತನಾಡಿದರೆ ಹಾಗೂ ಒಟ್ಟಿಗೆ ಹಾಡಿದರೆ ಅವರು ಪ್ರೇಮಿಗಳೇ? ಅವರು ಒಳ್ಳೆಯ ಸ್ನೇಹಿತರಾಗಲು ಸಾಧ್ಯವಿಲ್ಲವೇ? ಮಕ್ಕಳನ್ನು ನಿನಗೆ ಅವಳ/ಅವನ ಮೇಲೆ 'ಕ್ರಷ್' ಇದೆಯಾ? ಅಂತ ಕೇಳಲೂ ಶುರು ಮಾಡಿದ್ದಾರೆ. ಇದು ನಮ್ಮ ಯುವ ಜನರನ್ನು ದಾರಿ ತಪ್ಪಿಸಿದ ಹಾಗೆ ಆಗುವುದಿಲ್ಲವೇ? ಹಾಡಿನ ಕಾರ್ಯಕ್ರಮದಲ್ಲಿ ಪ್ರೇಮಿಗಳ ವಿಚಾರ ಯಾಕೆ ಬರಬೇಕು? ಹಿರಿಯರಾದ ತೀರ್ಪುಗಾರರಿಗಾದರೂ ಇದು ತಿಳಿಯಬೇಡವೇ? ಸ್ಪರ್ಧಿಗಳ ಮನಸ್ಸಿನಲ್ಲಿ ಇಲ್ಲದ್ದನ್ನು, 'ಏನೋ ಇದೆ' ಎಂದು ನಿರೂಪಕರು ಹಾಗೂ ಜಡ್ಜಸ್ ವೈಭವೀಕರಿಸುವುದೇಕೆ?

—ಜಯಂತಿ ಶಾಸ್ತ್ರಿ, ಮೈಸೂರು

**ವಾರದ ಪತ್ರ**

## ಬೆಳೆಯುವ ಪೈರು

ಕಲರ್ಸ್ ಕನ್ನಡದ 'ನನ್ನಮ್ಮ ಸೂಪರ್ ಸ್ಟಾರ್' ಒಂಥರಾ ಮಜವಾಗಿದೆ. 'ಮನೆಯೇ ಮೊದಲ ಪಾಠಶಾಲೆ, ಜನನಿ ತಾನೆ ಮೊದಲ ಗುರುವು, ಜನನಿಯಿಂದ ಪಾಠ ಕಲಿತ ಜನರು ಧನ್ಯರು' ಎಂದು ಪೂರ್ವಜರು ಹೇಳಿದ್ದರಲ್ಲಿ ಅತಿಶಯೋಕ್ತಿ ಇಲ್ಲ ಎಂಬುದಕ್ಕೆ ನಿದರ್ಶನವಾಗಿದೆ.

ಮಾಸ್ಟರ್ ಆನಂದ್ ಅವರ ಪುತ್ರಿ ನಾಲ್ಕು ವರ್ಷದ ವಂಶಿಕಾ ಅಂಜಲಿ ಕಶ್ಯಪ್ ತನ್ನ ಮುದ್ದು ಮಾತುಗಳಿಂದ ವೀಕ್ಷಕರ ಮನ ಗೆದ್ದಿದ್ದಲ್ಲದೆ ಭವಿಷ್ಯದಲ್ಲಿ ತಾನೊಬ್ಬ ಉತ್ತಮ ಮಾತುಗಾರ್ತಿ ಆಗಬಲ್ಲೆ ಎಂದು ನಿರೂಪಿಸಿದ್ದಾಳೆ. ಮನೆಯಲ್ಲಿ ಮಕ್ಕಳ ಎದುರು ಸುಳ್ಳು ಹೇಳಬಾರದು. ಮಕ್ಕಳಿಗೂ ಮಾತನಾಡಲು ಬಿಡಬೇಕು. ಮಗುವಿನ ಹೆಸರಿನಿಂದ ತಂದೆ ಗುರುತಿಸಿಕೊಳ್ಳುವಂತಾಗಬೇಕು ಇತ್ಯಾದಿಯಾಗಿ ತನ್ನ ಮನೋಕಾಮನೆಗಳನ್ನು ನಿರ್ಭೀತಿಯಿಂದ ತೆರೆದಿಟ್ಟಿದ್ದಾಳೆ.

'ಬೆಳೆಯುವ ಪೈರು ಮೊಳಕೆಯಲ್ಲಿ' ಎಂಬ ಮಾತಿನಂತೆ ಮುಂದೊಂದು ದಿನ ಸುಂದರ, ಸದೃಢ, ಸ್ವಚ್ಛ ಕನ್ನಡದ ಅಚ್ಚ ನಿರೂಪಕಿಯಾಗುವ ಎಲ್ಲ ಲಕ್ಷಣಗಳನ್ನು ಹೊಂದಿರುವ ವಂಶಿಕಾ ತಂದೆಯ ಹೆಸರನ್ನು ಖಂಡಿತ ಉಳಿಸುತ್ತಾಳೆ. ನಿಜವಾದ ಅರ್ಥದಲ್ಲಿ ರಿಯಾಲಿಟಿಯನ್ನು ಈ ಶೋ ತೆರೆದಿಡುತ್ತಿದೆ. ಬಹುಶಃ ಒಂದೇ ವಯಸ್ಸಿನ ಮಕ್ಕಳನ್ನು ಆರಿಸಿದ್ದರೆ ಶೋ ಇನ್ನೂ ಚೆನ್ನಾಗಿರುತಿತ್ತು.

—ವಾ. ಮುರಳೀಧರ, ತೀರ್ಥಹಳ್ಳಿ

## ನನ್ನಮ್ಮ ಸ್ಟಾರ್ ಸೂಪರ್

ವ್ಹಾವ್! ಪೂರ್ಣಚಂದ್ರ ಮೊಗದ ಮುದ್ದು ಕಂದಮ್ಮಗಳು, ಅವುಗಳ ಸೊಗಸಾದ ಹೆಜ್ಜೆ, ಚಿನಕುರಳಿಯಂತಹ ಮಾತುಗಳಿಂದ ಇಡೀ ಕಾರ್ಯಕ್ರಮದಲ್ಲಿ ನಗೆಯ ಹೊನಲು! ಅದೇ ಚರ್ವಿತಚರ್ವಣ ಧಾರಾವಾಹಿಗಳು, ನೃತ್ಯದ ಹೆಸರಿನ ಸರ್ಕಸ್‌ನಂತಹ ವಾರ್ತೆಗಳ ನಡುವೆ ಮರಳುಗಾಡಿನಲ್ಲಿ ಓಯಸಿಸ್ ಕಂಡಂತೆ, ಕುಲುಮೆಯಲ್ಲಿ ಕುಳಿತವಗೆ ಕುಳಿರ್ಗಾಳಿ ಸಿಂಚನವಾದಂಥ ಅನುಭವ!

ನ. 27 ರಿಂದ ಕಲರ್ಸ್ ಕನ್ನಡದಲ್ಲಿ ಆರಂಭವಾದ 'ನನ್ನಮ್ಮ ಸೂಪರ್ ಸ್ಟಾರ್' ರಿಯಾಲಿಟಿ ಶೋನ ಗಮ್ಮತ್ತು, ಗೈರತ್ತು ಅದ್ಭುತ. ಒಂದೇ ಪೀಕಲಾಟವೆಂದರೆ ಮಕ್ಕಳು ವೇದಿಕೆ ಸಿಕ್ಕ ಭರದಲ್ಲಿ ಮನೆಯ ಗುಟ್ಟು ರಟ್ಟು ಮಾಡಿ ಅಮ್ಮನನ್ನು 'ಸೂಪರ್ ಸ್ಟಾರ್' ಬದಲು 'ಪೇಪರ್ ಸ್ಟಾರ್' ಮಾಡುವ ಅಪಾಯವಿದೆ. ಮೊದಲ ದಿನವೇ ಅರಳು ಹುರಿದಂತೆ ಮಾತಾಡಿದ ಮಾಸ್ಟರ್ ಆನಂದರ ಮಗಳು ಪಟಾಕಿ ಪೋರಿ ವಂಶಿಕ ಅಂಜಲಿ ಕಶ್ಯಪಿ ಅಪ್ಪ–ಅಮ್ಮನ ಗುಟ್ಟುಗಳನ್ನೆಲ್ಲ ಹೇಳಿ ಮಾನ ಹರಾಜು ಹಾಕಿದ ವಿಡಿಯೊ ವೈರಲ್ ಆಗಿದೆ. ಕಲರ್ಸ್ ಕನ್ನಡದ ಈ ಪಯಣ ಸೂಪರ್ ಆಗಿರಲಿ.

—ಕೆ. ಶ್ರೀನಿವಾಸ ರಾವ್. ಹರಪನಹಳ್ಳಿ

## ವಿಪರ್ಯಾಸ

ಪುನೀತ್ ರಾಜ್‌ಕುಮಾರ್ ಅವರ ಅಕಾಲಿಕ ಮರಣ ಬಹಳ ಖೇದದ ವಿಷಯ. ಉತ್ತಮ ನಟರಾಗಿ, ಬಹಳ ಜನಪ್ರಿಯರಾಗಿ ಎಲ್ಲರ ವಿಶ್ವಾಸ ಗಳಿಸಿದ್ದ ಪ್ರೀತಿಯ 'ಅಪ್ಪು' ಅವರ ಅಗಲಿಕೆ ನಿಜಕ್ಕೂ ನೋವಿನ ಸಂಗತಿ.

ಆದರೆ ಅವರ ಹಠಾತ್ ನಿಧನದ ಒಂದು ತಿಂಗಳ ನಂತರವೂ ನಿರಂತರವಾಗಿ ನಮ್ಮ ಎಲ್ಲ ವಾಹಿನಿಗಳೂ ಪ್ರತಿದಿನ ಅವರ ಸಾವಿನ ಸುದ್ದಿಯನ್ನು ಮತ್ತು ಸಾವಿನ ನಂತರದ ಕಲಾಪಗಳನ್ನು ವೈಭವೀಕರಿಸುತ್ತಲೇ ಬರುತ್ತಿದ್ದಾರೆ. ಅವರ 'ನುಡಿ ನಮನ' ಅವರ ಬಾಲ್ಯದಿಂದ ಸಾವಿನವರೆಗೂ ಅವರ ಜೀವನ ಪಯಣ, ಅಂತ್ಯಕ್ರಿಯೆ, ಅಪರ ಕಾರ್ಯಗಳು, ಕನ್ನಡ ಮತ್ತು ಬೇರೆ ಭಾಷೆಯ ನಟ/ನಟಿಯರ ಶ್ಲಾಘನೆ, ಅವರ ಒಡನಾಟದ ಮಾಹಿತಿ ಎಲ್ಲವನ್ನೂ ಸವಿಸ್ತಾರವಾಗಿ ಮಿತಿಮೀರಿದ ಮೌಲ್ಯ ಕಟ್ಟಿನಂತೆ ಬಿತ್ತರಿಸುತ್ತಲೇ ಬರುತ್ತಿದ್ದಾರೆ.

ಇದೇ ವರ್ಷ ಕಣ್ಮರೆಯಾದ ಹಿರಿಯ ನಟಿ ಜಯಂತಿಯ ನಿಧನದ ಸುದ್ದಿ ಎಲ್ಲ ಮಾಧ್ಯಮಗಳಲ್ಲೂ ಕೇವಲ ಒಂದು ದಿನದ ಸುದ್ದಿಯಾಗಿತ್ತು, ಎಂತಹ ವಿಪರ್ಯಾಸ.

—ಶ್ರೀಧರ್, ಬೆಂಗಳೂರು

## ಸಾಮಾನ್ಯರೂ ಬರಲಿ

ಕಲರ್ಸ್ ಕನ್ನಡದ 'ನನ್ನಮ್ಮ ಸೂಪರ್ ಸ್ಟಾರ್'ನ ಆರಂಭವಾಗಿದೆ. ಇದರಲ್ಲಿ ವಿವಿಧ ರೀತಿಯ ಅಮ್ಮ–ಮಕ್ಕಳ ಪರಿಚಯ ತುಂಬ ಚೆನ್ನಾಗಿ ಮೂಡಿಬರುತ್ತಿದೆ. ವಾಹಿನಿಯವರಿಗೆ ಚಿಕ್ಕ ಸಲಹೆ, ದಯವಿಟ್ಟು ಸಾಧಾರಣ ಅಮ್ಮ ಮಕ್ಕಳನ್ನು ಪರಿಚಯಿಸುವ ಪ್ರಯತ್ನ ಮಾಡುವಿರಾ?

—ಕಮಲಾದೇವಿ ರಾಜಶೇಖರ ಹಳೂರ್, ಬೆಂಗಳೂರು

## ಉತ್ತರ ಕೊಡಿ

ಕಲರ್ಸ್ ಕನ್ನಡದ 'ಕನ್ನಡತಿ'ಯಲ್ಲಿ ಹರ್ಷ–ಭುವಿ ಪ್ರೀತಿಯ ನಿವೇದನೆಯಲ್ಲಿ ಎಷ್ಟು ಎಪಿಸೋಡ್ ಮಾಡಬಹುದು ನೀವು. ಯಾಕೆ ಹಿಂದಿನ ಎಪಿಸೋಡ್‌ಗೆ ಉತ್ತರ ಕೊಡುತ್ತಿಲ್ಲ. ಉದಾಹರಣೆಗೆ ಮನೆಯಲ್ಲಿ ಡ್ರಗ್ಸ್ ಇಟ್ಟಿದ್ದರ ಬಗ್ಗೆ, ಶಿವುನ ನಿಗೂಢ ಸಾವು ಹಾಗೂ ಆದಿ ಶಿವು ಸ್ನೇಹದ ಬಗ್ಗೆ ಡಾಕ್ಟರ್ ಮನೆಯಲ್ಲಿ ಹಣ ಸಿಕ್ಕ ಬಗ್ಗೆ, ಇವೆಲ್ಲದರ ಬಗ್ಗೆ ನೀವು ಉತ್ತರ ಕೊಡಬೇಕಲ್ಲ. ಪೊಲೀಸ್ ಇಲಾಖೆ ನೀವು ಹೇಳಿದ ಹಾಗೆ ಫೈಲ್ ಮುಚ್ಚುತ್ತಾರೆ ಹೇಗೆ? ದಯವಿಟ್ಟು ಇದಕ್ಕೆಲ್ಲ ಉತ್ತರ ಕೊಟ್ಟು ಮುಂದುವರಿದರೆ ಒಳ್ಳೆಯದು.

—ನಾಡಿಗ್ ರಾಮಚಂದ್ರ, ಬೆಂಗಳೂರು